ಶ್ರೀ ಶರಣಬಸಪ್ಪ ದರ್ಶನಾಪುರ: ಕುಡಿಯುವ ನೀರಿನ ವ್ಯವಸ್ಥೆಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಗದಗಿನಲ್ಲಿ 18 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹಾಕಿಕೊಂಡಿದ್ದೇವೆ ಹಾಗೂ ಮುಂಡರಗಿಯಲ್ಲಿ ಐದು ಕೋಟಿ ರೂಪಾಯಿ ವೆಚ್ಚದಲ್ಲಿ ಹಾಕಿಕೊಂಡಿದ್ದೇವೆ. ಮುಂಡರಗಿ ಸ್ಟೇಷನ್ ಮುಗಿದ ತಕ್ಷಣ ಸಂಪೂರ್ಣವಾಗಿ ಕುಡಿಯುವ ನೀರಿನ ವ್ಯವಸ್ಥೆಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಬರತಕ್ಕ ಡಿಸೆಂಬರ್ ಒಳಗಡೆ ಆ ಕೆಲಸ ಮುಗಿಸಬೇಕೆಂಬ ಕಾರ್ಯಕ್ರಮ ಕೂಡ ನಾವು ಹಾಕಿಕೊಂಡಿದ್ದೇವೆ. ಆದಾದ ತಕ್ಷಣ ಸಮಸ್ಯೆಗಳನ್ನೆಲ್ಲಾ ಬಗೆಹರಿಸ ಬಹುದೆಂದು ತಮಗೆ ಹೇಳುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್: ಇದರ ಜೊತೆಗೆ ಕೊರ್ಲಹಳ್ಳಿಯಿಂದ ಡಂಬಳ್‌ವರೆಗೆ ಎಕ್ಸ್‌ಪ್ರೆಸ್ ಫೀಡರ್‌ಲೈನ್ ಹಾಕುವುದರ ಬಗ್ಗೆ ನೀವು ಈಗಿನಿಂದಲೇ ಆಕ್ಷನ್ ಇನಿಷಿಯೇಟ್ ಮಾಡಿದರೆ ಅನುಕೂಲ ಆಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಏನೇನು ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕೋ ಅವೆಲ್ಲವನ್ನೂ ಹಾಕಿಕೊಳ್ಳುತ್ತೇವೆ. ಆದರ ಬಗ್ಗೆ ಬೇರೆ ಅಭಿಪ್ರಾಯ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ಈ ಎಕ್ಸ್‌ಪ್ರೆಸ್ ಫೀಡರ್ ಲೈನ್ ಬಗ್ಗೆ ಇಲ್ಲ.

ಶ್ರೀ ಶರಣಬಸಪ್ಪ ದರ್ಶನಾಪುರ: ಅದರ ಬಗ್ಗೆ ಸರ್ಕಾರದ ಗಮನಕ್ಕೆ ತಾವು ತಂದಿದ್ದೀರಿ. ಹೋದವರ್ಷ ಶೂನ್ಯವೇಳೆಯಲ್ಲಿ ಕೂಡ ಅದರ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ನಾವು ಈಗಾಗಲೇ ಎಲ್ಲಾ ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಕುಡಿಯುವ ನೀರಿನ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ನಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಆದರ ಬಗ್ಗೆ ಕಾರ್ಯಕ್ರಮ ಈಗಾಗಲೇ ಹಾಕಿಕೊಂಡಿದ್ದೇವೆ. ಅದು ಇಂಪ್ಲಿಮೆಂಟ್ ಆಗಬೇಕಾದರೆ ಒಂದು ತಿಂಗಳು ಆಹಬಹುದು. ಆ ಕೆಲಸವನ್ನು ಮಾಡಿಸಿಕೊಟ್ಟು ಆ ಗದಗ್‌ನಲ್ಲಿರತಕ್ಕ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ತೊಂದರೆ ಆಗದ ಹಾಗೆ ನಾವು ಸರ್ಕಾರದವರು ನೋಡಿಕೊಳ್ಳುತ್ತೇವೆ ಎಂದು ತಮಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಎನ್. ರಾಜಣ್ಣ : ನನ್ನ ಪ್ರಶ್ನೆಗೆ ಉತ್ತರವನ್ನು ಯಾವಾಗ ಕೊಡುತ್ತೀರಿ.

ಪ್ರಶ್ನೆ ಸಂಖ್ಯೆ : 1080.

ಅಧ್ಯಕ್ಷರು : ಎರಡು ದಿವಸ ಟೈಮ್ ತೆಗೆದುಕೊಂಡಿದ್ದಾರೆ.

ಶ್ರೀಎನ್. ರಾಜಣ್ಣ: ತಮಗೋ ಪೇಪರ್ ಕಟಿಂಗ್ ಏಕೆ ಕಳಸಿದ್ದೇನೆಂದರೆ ಅಲಸೂರು ಕರೆಯ ಸುತ್ತಲೂ ಇರತಕ್ಕ ಜನರು ಈಗಾಗಲೇ ಜಾಂಡೀಸ್, ಲೀವರ್ ಪ್ರಾಬ್ಲಮ್‌ನಿಂದ ಸಫರ್ ಆಗುತ್ತಿದ್ದಾರೆ. ಹಣ ಯಾವ ತರಹ ಖರ್ಚಾಗುತ್ತಿದೆ.

ಅಧ್ಯಕ್ಷರು : ನಾನು ಎಲ್ಲಾ ವಿಚಾರವನ್ನು ಓದಿದ್ದೇನೆ. ಎರಡು ದಿವಸ ಕಾಲಾವಕಾಶ ಕೊಡಿ.

ರಾಯಚೂರಿನಲ್ಲಿ ಅಪರಾಧಗಳು

147 (369) ಶ್ರೀ ಮತಿ ಬಿ.ಟಿ.ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ರಾಜ್ಯದಲ್ಲಿ ದಿನೇ ದಿನೇ ಕೊಲೆ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಯಾವ ಕ್ರಮ ಕೈ ಗೊಳ್ಳಲಾಗಿದೇ?

ಆ) ರಾಯಚೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಎಷ್ಟು ಕೊಲೆಗಳು ಜರುಗಿವೆ : ಇದಕ್ಕೆ ಸಂಬಂಧ ಪಟ್ಟಂತೆ ಎಷ್ಟು ಜನರನ್ನು ಗುರುತಿಸಿ ಶಿಕ್ಷಿಸಲಾಗಿದೆ.

ಇ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ 1995ರಲ್ಲಿ ತಾಲ್ಲೂಕು ಜನತಾ ದಳದ ಅಧ್ಯಕ್ಷೆ ಮತ್ತು ಅವನ ಪುಗ ಜೋಡಿ ಕೊಲೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಬೆಯೆ : ಹಾಗಿದ್ದಲ್ಲಿ ಕೊಲೆ ಗಡುಕರನ್ನು ಪತ್ತೆ ಹಚ್ಚಿ ಅವರ ಮೇಲೆ ಸೂಕ್ತ ಕ್ರಮ ಕೈ ಗೊಳ್ಳಲಾಗಿದೆಯೇ ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಈ) ಹಾಗಿದ್ದಲ್ಲಿ ಎಂದು ಕ್ರಮ ಕೈ ಗೊಳ್ಳಲಾಗುವುದು?

ಉ) ರಾಜ್ಯದಲ್ಲಿ ಕಳೆದ 4 ವರ್ಷಗಳಿಂದ ವರದಕ್ಷಿಣೆ ಕೊಲೆಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ರಾಯಚೂರು ಜಿಲ್ಲೆಯಲ್ಲಿ ಕಳೆದ 4 ವರ್ಷಗಳಿಂದ ಎಷ್ಟು ಕೊಲೆ ಪ್ರಕರಣ ಜರುಗಿದೆ. ಆ ಬಗ್ಗೆ ಎಷ್ಟು ಘಟನೆಗಳ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ;

ಶ್ರೀ ಪಿ.ಜಿ. ಆರ್ ಸಿಂಧ್ಯ (ಗೃಹ ಸಚಿವರು) :

ಆ) 1996, 1997 ಮತ್ತು 1998ರಲ್ಲಿ ದಾಖಲಾದ ಕೊಲೆಗಳು ಮತ್ತು ದರೋಡೆಯ ಪ್ರಕರಣಗಳು ಈ ಕೆಳಕಂಡಂತಿವೆ.

ವರದಿಯಾದ ಪ್ರಕರಣಗಳು:

ಕ್ರಮ ಸಂಖ್ಯೆ	ಅಪರಾಧ ಶೀರ್ಷಿಕೆ	1996	1997	1998
1)	ಕೊಲೆ	1594	1733	1715
2)	ದರೋಡೆ	253	283	285

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಈ ಅಪರಾಧಗಳು ಅತಿ ವೆಚ್ಯವಾದಂತೆ ಕಂಡು ಬರುವುದಿಲ್ಲ. ಈ ಅಪರಾಧಗಳನ್ನು ತಡೆಗಟ್ಟಲು ಕೆಳಗಿನಂತೆ ಕ್ರಮ ಕೈಗೊಳ್ಳಲಾಗಿದೆ.

1) ಪೋಲೀಸ್ ಗಸ್ತನ್ನು ಬಿಗಿಗೊಳಿಸಲಾಗಿದೆ.

2) ಮಾಡಿ ಖೈದಿಗಳ ಹಾಗೂ ಎಂ.ಓ.ಬಿ. ಖೈದಿಗಳ ಮೇಲೆ ತೀವ್ರ ನಿಗಾ ವಹಿಸಿದೆ.

3) ಬೆಂಗಳೂರು, ಬಳ್ಳಾರಿ ಮತ್ತು ಗುಲ್ಬರ್ಗಾಗಳಲ್ಲಿ ದರೋಡೆ ಪ್ರತಿಬಂಧಕ ದಳಗಳು ಅಸ್ತಿತ್ವದಲ್ಲಿವೆ.

4) ಓ.ವಿ. ಮತ್ತು ತಲೆ ಮರೆಸಿಕೊಂಡ ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ತೀವ್ರ ಪ್ರಯತ್ನವನ್ನು ಕೈಗೊಳ್ಳಲಾಗಿದೆ.

5) ನೆರೆಹೊರೆ ಕಾವಲು ಸಮಿತಿಗಳನ್ನು ಅನೇಕ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

6) ವಿಶೇಷ ಪೋಲೀಸ್ ದಳಗಳನ್ನು ಚುರುಕುಗೊಳಿಸಲಾಗಿದೆ.

7) ತನಿಖೆಯನ್ನು ಉತ್ತಮಪಡಿಸಲು ಸತತ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 1997, 1998 ಮತ್ತು 1999 (ದಿನಾಂಕ : 28-2-99) ರವರೆವಿಗೆ ರಾಯಚೂರು ಜಿಲ್ಲೆಯಲ್ಲಿ ದಾಖಿಲಾದ ಕೊಲೆ ಪ್ರಕರಣಗಳು ಮತ್ತು ಬಂಧಿಸಲ್ಪಟ್ಟ ಆರೋಪಿಗಳ ಹಾಗೂ ಶಿಕ್ಷೆಗೊಳಾಗದವರ ವಿವರಗಳು ಈ ಕೆಳಗಿನಂತಿವೆ.

ವರ್ಷ ವಾರು	ವರದಿಯಾದ ಕೊಲೆ ಪ್ರಕರಣಗಳು	ಬಂಧಿಸಲ್ಪಟ್ಟ ಆರೋಪಿತರ ಸಂಖ್ಯೆ	ಶಿಕ್ಷೆಗೊಳಪಟ್ಟ ವ್ಯಕ್ತಿಗಳ ಸಂಖ್ಯೆ
1997	56	137	1
1998	51	104	-
1999 (ದಿನಾಂಕ 28-2-99ರವರೆವಿಗೆ)	9	5	-

ಇ) ಹೌದು. ಈ ಸಂಬಂಧದಲ್ಲಿ ದಿನಾಂಕ : 17-4-95 ರಂದು ಜಾಲಹಳ್ಳಿ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 29:95 ಕಲಂ 147, 148, 341, 302, 120 ಬಿಬಿರೆಡ್ ವಿತ್ 149ಐ.ಪಿ.ಸಿ. ಯು ದಾಖಿಲಾಗಿದೆ. ಮುಂಡರಗಿ ಯಿಂದ ಸ್ಕೂಟರ್‌ನಲ್ಲಿ ತಮ್ಮ ಹಳ್ಳಿಗೆ ಹೋಗುತ್ತಿದ್ದಾಗ ಆರೋಪಿತರಾದ ಮಹಬೂಬ್ ಕಟ್ಟಮಲ್ಲಿ ಮತ್ತು ಇತರ 21 ಜನರು ಅವರನ್ನು ಹತ್ಯೆ ಮಾಡಿದ್ದು ಈಕೃತ್ಯವು ದೇವೆಂದ್ರಪ್ಪ ಮತ್ತು ಇತರರ ಪ್ರೇರಣೆಯಿಂದ ಉಂಟಾಗಿರುತ್ತದೆ. ಮುಂಡರಗಿ ಯಲ್ಲಿನ ದೇವಸ್ಥಾನದಲ್ಲಿ ಮತ್ತು ಒಪ್ಪಿಗೆ ಇಲ್ಲದೆ ಪೂಜೆ ನಡೆಸುತ್ತಿದ್ದ ಕಾರಣದ ಮೇಲೆಹತ್ಯೆ ನಡೆದಿರುತ್ತದೆ.

ಈ) ಈ ಪ್ರಕರಣದಲ್ಲಿ ಒಟ್ಟು 25 ವ್ಯಕ್ತಿಗಳು ಆರೋ ಪಿತರಾಗಿದ್ದು ಅದರಲ್ಲಿ ಹತ್ತು ಜನರನ್ನು ಬಂಧಿಸಲಾಗಿದೆ. ಉಳಿದ 15 ಜನರು ನಿರೀಕ್ಷಣ ಜಾಮೀನನ್ನು ನ್ಯಾಯಾಲಯದಿಂದ ಪಡೆದಿರುತ್ತಾರೆ. ಪ್ರಸ್ತುತ ಎಲ್ಲಾ ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದು ಪ್ರಕರಣವು ಎಸ್.ಸಿ.ಸಂಖ್ಯೆ : 143 : 97ರಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಈ ಪ್ರಕರಣತನಿಖೆಯನ್ನು ಸಿ.ಓ.ಡಿ. ನಡೆಸಿರುತ್ತಾರೆ.

ಉ) ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ಮತ್ತು ರಾಯಚೂರು ಜಿಲ್ಲೆಯಲ್ಲಿ ವರದಿಯಾದ ವರದಕ್ಷಿಣೆ ಸಾವುಗಳ ಪ್ರಕರಣಗಳ ವಿವರಗಳು ಈ ಕೆಳಗಿನಂತಿವೆ.

ವರ್ಷಾವಾರು	ರಾಜ್ಯದಲ್ಲಿ ವರದಿಯಾದ ವರದಕ್ಷಿಣೆ ಸಾವುಗಳು	ರಾಯಚೂರು ಜಿಲ್ಲೆಯಲ್ಲಿ ವರದಿಯಾದ ಸಾವುಗಳು ಪ್ರಕರಣಗಳು	ದಸ್ತಗಿರಿ ಮಾಡಲ್ಪಟ್ಟ ವ್ಯಕ್ತಿಗಳ ಸಂಖ್ಯೆ
1995	218	-	-
1996	211	5	13
1997	217	2	10
1998	233	2	5

ಮೇಲಿನ ಅಂಕಿ ಅಂಶಗಳಿಂದ ಈ ಅಪರಾಧಗಳು ಅಷ್ಟು ಹೆಚ್ಚಾದಂತೆ ಕಂಡು ಬರುವುದಿಲ್ಲ. ಈ ಅಪರಾಧಗಳನ್ನು ತಡಗಟ್ಟಲು ಕೆಳಗಿನಂತೆ ಕ್ರಮಕೈಗೊಳ್ಳಲಾಗಿದೆ.

1) ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ ಏಳು ಮಹಿಳಾ ಪೋಲೀಸ್ ಠಾಣೆಯನ್ನು ತೆರೆಯಲು ಸರ್ಕಾರವು ಮಂಜೂರಾತಿಯನ್ನು ನೀಡಿದ್ದುಬೆಳಗಾಂ ಮತ್ತು ಶಿವಮೊಗ್ಗವನ್ನು ಹೊರತು ಪಡಿಸಿ ಉಳಿದ ಕಡೆ ಈ ಪೋಲೀಸ್ ಠಾಣೆಗಳನ್ನು ಈಗಾಗಲೇ ತೆರೆಯಲಾಗಿದೆ.

2) ಮಹಿಳಾ ಕುಂದುಕೊರತೆ ವಿಭಾಗಗಳನ್ನು ವಿವಿಧ ಜಿಲ್ಲೆಗಳಲ್ಲಿ ಅಸ್ಥಿತ್ವಕ್ಕೆ ತರಲಾಗಿದೆ.

3) ಸಿ.ಐ.ಡಿ.ಯಲ್ಲಿ ವರದಕ್ಷಿಣೆ ನಿಷೇದ ದಳವು ಕಾರ್ಯ ನಿರ್ವಹಿಸುತ್ತಿದೆ.

4) ಬೆಂಗಳೂರು ನಗರ ಪೋಲೀಸರು ಮಹಿಳಾ ಸಹಾಯ ವಾಣಿ ರೂಪಿಸಿದ್ದು ಇದರಿಂದ ನೊಂದ ಮಹಿಳೆಯರಿಗೆ ಬಹಳ ಸಹಾಯವಾಗುತ್ತಿದೆ.

ಶ್ರೀಮತಿ ಬಿ.ಟಿ ಲಲಿತಾ ನಾಯಕ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ದಿನೇ ದಿನೇ ಕೊಲೆ, ದರೋಡೆ ಪ್ರಕರಣಗಳು ಹೆಚ್ಚಾಗಿದೆ. ಇದನ್ನು ತಡೆಗಟ್ಟಲು ತಾವೇನು ಮಾಡಿದ್ದೀರಿ ಎಂಬ ಪ್ರಶ್ನೆಗೆ ಅನಗು ಉತ್ತರ ಕೊಟ್ಟಿದ್ದಾರೆ. 1996ರಲ್ಲಿ 1594 ಕೊಲೆ ಆಗಿದ್ದಾವೆ, 1997ರಲ್ಲಿ 1733 ಕೊಲೆ ಆಗಿದ್ದಾವೆ, ಮತ್ತು 1998ರಲ್ಲಿ 1715 ಕೊಲೆ ಆಗಿದ್ದಾವೆ. ಎಂದು ಹೇಳುತ್ತಾ, ದರೋಡೆ ಬಗ್ಗೆ ಹೇಳುತ್ತಾ 1996ನೇ ಇಸವಿಯಲ್ಲಿ 253 ಆಗಿದ್ದಾರೆ 1997ನೇ ಇಸವಿಯಲ್ಲಿ 283 ಆಗಿದೆ ಹಾಗೂ 1998ರಲ್ಲಿ 285 ಆಗಿದೆ. ಈಗ ಅವರೇನು ಹೇಳುತ್ತಾರೆ ಎಂದರೆ ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಅಪರಾಧಗಳು ಕಡಿಮೆ ಆದ ಹಾಗೆ ಅನಿಸುತ್ತದೆ ಎಂದು ಹೇಳುತ್ತಾರೆ. ನಿಜ ಒಂದು ರೀತಿಯಿಂದ ಕಡಿಮೆ ಆದರೂ ಒಂದು ರೀತಿಯಿಂದ ಹೆಚ್ಚಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಅವರು ಪೋಲೀಸ್ ಇಲಾಖೆಯನ್ನು ಬಿಗಿಗೊಳಿಸಿರುವುದು, ದರೋಡೆ ಪ್ರತಿಬಂಧಕ ದಳ ಮಾಡಿರುವುದು, ಎಲ್ಲವನ್ನೂ ಬಹಳಷ್ಟು ಹೇಳಿದ್ದಾರೆ. ನಿಜವಾಗಿಯೂ ಗೃಹ ಮಂತ್ರಿಗಳ ಕೆಲಸ ಬಹಳ ಮೆಚ್ಚುವಂತಹದ್ದು ಇದೆ. ಆದರೂ ಕೂಡ ತಾವೇನು ರಾಯಚೂರಿನ ಬಾಲಿಕಾ ಗೃಹದಿಂದ ಸ್ವಾತಿ ಎನ್ನುವ ಒಂದು ಹುಡುಗಿ ತಪ್ಪಿಸಿಕೊಂಡು ಹೋಯಿತು,

ಅದರ ಬಗ್ಗೆ ಎಲ್ಲರೂ ಹೇಳುತ್ತಾರೆ. ತಾಂಬೂಲವನ್ನು ಆಗೆಯುತ್ತಾರೆಲ್ಲ, ಆ ರೀತಿಯಲ್ಲಿ ದಿನ ದಿನವೂ ಎಲ್ಲರ ಬಾಯಲ್ಲಿಯೂ ಬಂತು. ಗಣ್ಯರ ಮಕ್ಕಳು ಅವಳನ್ನು ಕರೆದು ಕೊಂಡು ಹೋಗಿ ಅತ್ಯಾಚಾರ ಮಾಡು, ಬಹಳಷ್ಟು ಮಾತೇ ಬರದೆ ಹಾಗೆ ಆ ಹುಡುಗಿಗೆ ಅಷ್ಟೆಲ್ಲಾ ಆಯಿತು ಎಂದು ಎಲ್ಲರ ಬಾಯಲ್ಲಿಯೂ ವಿಚಾರ ಬಂತು. ಆದರೂ ಕೂಡ ಆ ಪ್ರಕರಣ ಹೊರಗೆ ಬರಲೇ ಇಲ್ಲ. ಇವತ್ತಿಗೂ ಕೂಡ 8- 10 ಜನ ಹುಡಗಿಯರು ಓಡಿ ಹೋದರು. ಕೆಲವರು ಬಂದರು. ಕೆಲವರು ಬರಲೇ ಇಲ್ಲ. ಏಕೆ ಹೀಗಾಯಿತು ಎನ್ನುವ ಬಗ್ಗೆ ಇವತ್ತಿನವರೆಗೂ ನ್ಯಾಯ ಸಿಕ್ಕಿಲ್ಲ. ದಯವಿಟ್ಟು ಅದರ ಕಡೆಗೆ ತಾವು ಹೆಚ್ಚು ಗಮನ ಕೊಡಬೇಕು. ಆಮೇಲೆ ಕಳೆದ ವರ್ಷದಿಂದ ವರದಕ್ಷಿಣೆ ಕೊಲೆ ಬಗ್ಗೆ ಹೇಳಿದಿರಿ. ಅಲ್ಲಿ ವರದಕ್ಷಿಣೆ ಕೊಲೆ ಆಗುತ್ತದೆ, ಅದು ಹಿಂದುಳಿದ ಪ್ರದೇಶ ಆಗಿದ್ದರೂ ಸಹ ಹೆಚ್ಚು ಹೆಚ್ಚು ವರದಕ್ಷಿಣೆ ಕೊಲೆ ನಡೆಯುತ್ತಿದೆ. ತಾವೇನೋ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೀರಿ. ಆದರೆ ಎಷ್ಟು ಪ್ರಕರಣದ ಬಗ್ಗೆ ತಾವು ಕ್ರಮ ಕೈಗೊಂಡಿದ್ದೀರಿ ಎಂಬ ಪ್ರಶ್ನೆಗೆ ಐದು ಎಂದು ಉತ್ತರ ಕೊಟ್ಟಿದ್ದೀರಿ. ಇದು ಸಾಲದು. ಯಾರು ಆ ತರಹ ಮಾಡಿದ್ದಾರೆ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಆಮೇಲೆ ಜನತಾ ದಳದ ಅಧ್ಯಕ್ಷರು ಮತ್ತು ಅವರ ಮಗ, ಜೋಡಿ ಕೊಲೆ ಆಗಿರುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನಿಜ ಅದಾಗಿದೆ. ಕ್ರಮ ಜರುಗಿಸಿದ್ದೇವೆ. 25 ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇನೆಂದು ಹೇಳಿದ್ದೀರಿ. ಆದರೆ ಅವರೆಲ್ಲರೂ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ನಾವು ಕೊಲೆ ಮಾಡಿದ್ದು ನಿಜ. ಯಾರು ಹಿಡಿಯುತ್ತಾರೆ ಹಿಡಿಯಲಿ ನೋಡೋಣ. ಆ ಎಂಎಲ್ಎ ಏನು ಮಾಡುತ್ತಾರೆ, ಆ ಎಂಪಿ ಏನು ಮಾಡುತ್ತಾರೆ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಆದರೆ ಇವತ್ತಿಗೆ ನಾಲ್ಕು ವರ್ಷ ಆಯಿತು. ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಿಲ್ಲ. ತಾವು ಹೇಳಿದರಿ, ಸಿ.ಓಡಿ ತನಿಖೆ ಮಾಡಿಸುತ್ತೇನೆ ಎಂದು ಹೇಳಿದಿರಿ. ಆ ಸಿ.ಓಡಿ ತನಿಖೆಯಲ್ಲಿ ನಮಗೆ ನಂಬಿಕೆ ಇಲ್ಲ. ತಾವು ಆ ಕಡೆಗೆ ಒಂದಿಷ್ಟು ನಿಗಾ ವಹಿಸಿ ಆದಷ್ಟು ಬೇಗನೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿಯ ಜನಗಳು ನಮ್ಮನ್ನು ಬಹಳಷ್ಟು ಬ್ಲೇಮ್ ಮಾಡುತ್ತಿದ್ದಾರೆ. ಒಂದು ಆಪಾದನೆಗೆ ನಮ್ಮನ್ನು ಗುರಿ ಮಾಡುತ್ತಿದ್ದಾರೆ, ಅದರಿಂದ ತಪ್ಪಿಸಿ ತಾವು ಇದಕ್ಕೆ ಏನು ಉತ್ತರ ಹೇಳುತ್ತೀರಿ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ: ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜನತಾ ದಳ ಅಧ್ಯಕ್ಷರ ಕೊಲೆ ವಿಚಾರವಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಸದರಿ ಕೊಲೆ ಪ್ರಕರಣದಲ್ಲಿ 25 ಜನ ಆರೋಪಿಗಳಿದ್ದು, ಈ ಪೈಕಿ 15 ಜನರು ನಿರೀಕ್ಷಣಾ ಜಾಮೀನಿನ ಮೇಲಿದ್ದಾರೆ. ಹಾಗೂ ಹತ್ತು ಜನರನ್ನು ಬಂಧಿಸಿದ್ದು ಅವರೂ ಸಹ ಜಾಮೀನು ತೆಗೆದುಕೊಂಡಿದ್ದಾರೆ. 25 ಜನ ಆರೋಪಿಗಳಾಗಿರುವ ಸಂಬಂಧದಲ್ಲಿನ್ಯಾಯಾಲಯದಲ್ಲಿ ವಿಚಾರಣೆಯಾಗುತ್ತಿರುವುದರಿಂದ ಈಗ ಸಿ.ಓ.ಡಿ. ತನಿಖೆಯ ಪ್ರಶ್ನೆ ಬರುವುದಿಲ್ಲ. ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಅವರು ಇದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಎರಡನೆಯದಾಗಿ, ಸ್ವಾತಿ ಕೊಲೆ ವಿಚಾರವಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದು ಪ್ರತ್ಯೇಕ ಪ್ರಶ್ನೆಯಾಗಿರುವುದರಿಂದ ಆದರೂ ಸಹ ನಾನು ಈ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ಆ ರೀತಿಯ ಘಟನಾವಳಿ ಮರುಕಳಿಸದಂತೆ ಕ್ರಮ ತೆಗೆದುಕೊಳ್ಳುತ್ತೇನೆ. ಮೂರನೆಯದಾಗಿ, ವರದಕ್ಷಿಣೆ ಕೊಲೆ ಬಗ್ಗೆ ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ನಾನು ಒಪ್ಪುತ್ತೇನೆ. ಕನ್ವಿಕ್ಷನ್ ರೇಟ್ ಬಹಳ ಕಡಿಮೆ ಇದೆಯೆಂದು ನಾನು ಈಗಾಗಲೇ ಸಾರ್ವಜನಿಕ ಸಭೆಯಲ್ಲಿ ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ.

ಅಧ್ಯಕ್ಷರು : ನಿನ್ನೆ ನನ್ನ ಹತ್ತಿರ ಮಹಿಳಾ ವಿಮೋಚನಾ ಸಂಘಟನೆ ಮತ್ತು ಕೆಲವು ಇನ್ನಿತರ ಸಂಸ್ಥೆಗಳವರು ಬಂದು ಸಮಾಜದಲ್ಲಿ ಹೆಣ್ಣುಮಕ್ಕಳು ಎದುರಿಸುತ್ತಿರುವ ಸಮಸ್ಯೆ ಕುರಿತು ಪ್ರಸ್ತಾಪಿಸಿದಾಗ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ವರದಕ್ಷಿಣೆ ವಿಚಾರ ಹಾಗೂ ಅಸಹಜ ಸಾವುಗಳ ಕುರಿತು ಚರ್ಚಿಸುವುದಕ್ಕೆ ಇಂದು ಮಧ್ಯಾಹ್ನ 3.00 ಗಂಟೆಗೆ ನಾನು ಹಾಗೂ ಮೇಲ್ಮನೆಯ ಸಭಾಪತಿಯವರು ಸೇರಿ ಜಂಟಿ ಸಭೆ ಕರೆದಿದ್ದು, ಸದರಿ ಸಭೆಗೆ ಎರಡೂ ಸದನಗಳ ಮಹಿಳಾ ಶಾಸಕಿಯವರನ್ನು ಆಹ್ವಾನಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ತಾವು ಕರೆದಿರತಕ್ಕಂಥ ಸಭೆಯನ್ನು ನಾನು ಸ್ವಾಗತಿಸುತ್ತೇನೆ. ಆ ಸಭೆಗೂ ನಾನೂ ಸಹ ಬರುತ್ತೇನೆ, ತಾವು ಹೇಳಿದರೆ ಸಭೆಗೆ ನಮ್ಮ ಇಲಾಖಾಧಿಕಾರಿ ಗಳನ್ನು ಸಹ ಕರೆಯಿಸುತ್ತೇನೆ. ನಾನು ಈ ಗ ವಿಷಯಕ್ಕೆ ಬರುತ್ತೇನೆ. ಕನ್ವಿಕ್ಷನ್ ರೇಟ್ ಕಡಿಮೆ ಇರುವ ಕಾರಣವೇನೆಂದರೆ. ನಾನು ಸಿ.ಓ.ಡಿ.ಯ ಡಿ.ಜಿ.ಪಿ. ಅವರನ್ನು ಕರೆದು ಬಹಳ ಚೆನ್ನಾಗಿ ಅನಲೈಸ್ ಮಾಡಿದೆ. ವರದಕ್ಷಿಣೆ ಸಾವುಗಳ ವಿಚಾರದಲ್ಲಿ ತನಿಖೆ ಮಾಡುವ ಅಧಿಕಾರಿಗಳು ಅವರಾಗಿದ್ದು, ನಾನು ಕೆಲವು ಕೇಸ್‌ಗಳನ್ನು ಗಮನಿಸಿದಾಗ ವಿಟ್‌ನೆಸ್ಸ್ ಮುಂದೆ ಬರುವುದಿಲ್ಲ, ಕಾಂಪ್ರಮೈಸ್ ಮಾಡಿಕೊಳ್ಳುತ್ತಾರೆ, ಅದೇ ನಮಗೆ ತೊಂದರೆಯಾಗುವುದು. ಆದರೂ ಸಹ ಎರಡು ವಿಷಯಗಳಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ದರೋಡೆಗಳ ಬಗ್ಗೆ ಸದ್ಯದಲ್ಲಿ ಒಂದು ಕಠಿಣವಾದ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದ್ದೇನೆ. ಆದುದರಿಂದ, ಈ ನಿಟ್ಟಿನಲ್ಲಿ ಅಧಿವೇಶನ ಮುಗಿಯುವುದರೊಳಗೆ ಎಲ್ಲಾ ಉನ್ನತಾಧಿಕಾರಿಗಳನ್ನು ಕರೆಯಿಸುತ್ತಿದ್ದೇನೆ. ರಾಜ್ಯದಲ್ಲಿ ಕೆಲವು ಕೊಲೆ, ದರೋಡೆ ಹಾಗೂ ಕಳವು ಪ್ರಕರಣಗಳು ನಡೆದಿರುವುದು ನನ್ನ ಗಮನಕ್ಕೆ ಬಂದಿರುವುದರಿಂದ ಸ್ಟೇಷನ್ ಹೌಸ್ ಆಫೀಸರ್ಸ್ ಯಾರಿದ್ದಾರೆ, ಅವರಿಗೆ ಎಚ್ಚರಿಕೆಯನ್ನು ಸಹ ಈ ಸದನದ ಮೂಲಕ ಕೊಡಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಅವರೆ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದನ್ನು ನಾನು ರೇಂಜ್‌ವೈಸ್ ರಿವ್ಯೂ ಮಾಡುತ್ತಿದ್ದೇನೆ. ಅಧಿವೇಶನ ಮುಗಿದ ತಕ್ಷಣ ನಾನು ರಾಯಚೂರು, ಗುಲ್ಬರ್ಗ ಹಾಗೂ ಬೀದರ್ ಜಿಲ್ಲೆಗಳಿಗೆ ಹೋಗುತ್ತಿದ್ದು ಆ ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿರುವ ವಿಚಾರಗಳನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಪೋಲೀಸ್ ಇನ್‌ವೆಸ್ಟಿಗೇಷನ್‌ನಲ್ಲಿ ಏನಾದರೂ ಬದಲಾವಣೆಯಾಗಿದೆಯೇ ಎಂದು ಮಾನ್ಯ ಸಚಿವರು ತಿಳಿಸಬೇಕು. ಏಕೆಂದರೆ ನಮ್ಮ ಬರೋಡೆ ಪ್ರಕರಣವಾಗಿದೆಯೆಂದು ನಾವು ಪೋಲೀಸಿನವರಿಗೆ ತಿಳಿಸಿದರೆ ನಿಮ್ಮಲ್ಲಿ ಯಾರಿಗಾದರೂ ಆ ಬಗ್ಗೆ ಗೊತ್ತಿದ್ದರೆ ಮಾಹಿತಿ ಕೊಡಿ, ನಾವು ಹಿಡಿಯುತ್ತೇವೆ ಎಂದು ಹೇಳುತ್ತಾರೆ, ಅವರೇ ಆ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಬೇಕು. ಗೊತ್ತಿದ್ದರೆ ಪೋಲೀಸರಿಗೇಕೆ ಹೇಳುತ್ತಾರೆ, ಊರಿನವರೇ ಕಟ್ಟಿ ಹಾಕಿಕೊಂಡು ಹೊಡೆಯುತ್ತಾರೆ.

ಅಧ್ಯಕ್ಷರು : ಪೋಲೀಸರು ನಮ್ಮನ್ನು ಆ ಬಗ್ಗೆ ಕೇಳುವ ಉದ್ದೇಶ ನಿಮಗೆ ಅರ್ಥವಾಗುವುದಿಲ್ಲವೇ? ನಿಮಗೆ ಗೊತ್ತಿದ್ದರೆ ಹೇಳಿ ಎಂದು ಪೋಲೀಸರು ನಮ್ಮನ್ನು ಏಕೆ ಕೇಳುತ್ತಾರೆಂದು ನಿಮಗೆ ಅಷ್ಟೂ ಗೊತ್ತಾಗುವುದಿಲ್ಲವೇ? ಸುರೇಶಕುಮಾರ್‌ರವರೇ, ನೀವು ಅವರಿಗೆ ಅದರ ಬಗ್ಗೆ ಹೇಳಿ. ಅಪರಾಧಿಗಳು ನಿಮಗೆ ಗೊತ್ತಿದ್ದರೆ ಹಿಡಿದು ಕೊಡಿ ಎಂದು ಪೋಲೀಸರು ನಮ್ಮನ್ನೇಕೆ ಕೇಳುತ್ತಾರೆ?

ಶ್ರೀ ಆರಗ ಜ್ಞಾನೇಂದ್ರ: ಅಪರಾಧಿಗಳನ್ನು ನಾವು ಹಿಡಿದುಕೊಡುವುದಿಲ್ಲ, ಹಾಗಾದರೆ ಅವರೇಕೆ ಇರುವುದು? ಅವರಿಗೆ ಇಷ್ಟೊಂದು ಸಂಬಳ ಕೊಟ್ಟು ತನಿಖೆ ಮಾಡುವುದಾದರೂ ಏಕೆ?

ಅಧ್ಯಕ್ಷರು : ಅವರ ಇಲಾಖೆ ತರಹ ನಿಮಗೂ ಏನಾದರೂ ಗೊತ್ತಿರುತ್ತದೆಂದು ಅವರು ನಮ್ಮನ್ನು ಕೇಳುವುದು.

ಶ್ರೀ ಆರಗ ಜ್ಞಾನೇಂದ್ರ : ಅವರು ಇನ್‌ವೆಸ್ಟಿಗೇಷನ್ ಮಾಡುವುದಿಲ್ಲ, ಇದರ ಬಗ್ಗೆ ನಾವು ಪದೇ ಪದೇ ಇನ್‌ಫ್ಲುಯೆನ್ಸ್ ಮಾಡುವಂಥ ಅವಶ್ಯಕತೆ ಬರಬಾರದು. ನಮ್ಮ ಮಲೆನಾಡಿನಂಥ ತಾಲ್ಲೂಕುಗಳಲ್ಲಿ ಒಂದೊಂದು ಮನೆ ಇರುವಂಥ ಪ್ರದೇಶಗಳಲ್ಲಿ ಇಂತಹ ಪ್ರಕರಣಗಳಾದಾಗ ಪೋಲೀಸರು ಅಪರಾಧಿಗಳನ್ನು ಪತ್ತೆ ಹಚ್ಚಿ ಹಿಡಿದು ಅವರನ್ನು ಪ್ರಶ್ನಿಸಿ ಭಯಪಡಿಸಿದರೆ ಅಲ್ಲಿ ಅಂತಹ ಪ್ರಕರಣಗಳು ಮರುಕಳಿಸುವುದಿಲ್ಲ. ಬಹುಶಃ ಸಿಂಧ್ಯರವರು ಹೊಸದಾಗಿ ಗೃಹ ಖಾತೆಯನ್ನು ವಹಿಸಿಕೊಂಡಿರುವುದರ ಬಗ್ಗೆ ನಿಮ್ಮ ಪೋಲೀಸ್ ಅಧಿಕಾರಿಗಳಿಗೆ ಗೊತ್ತಾಗಿಲ್ಲವೇ? ಆದುದರಿಂದ, ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ನಡೆದಿರುವ ಘಟನೆಗಳ ಬಗ್ಗೆ ನಿಯಮ 351ರಡಿ ಪ್ರಸ್ತಾಪಿಸಿದ್ದು ಆದಕ್ಕೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದರೂ ಸಹ ಈ ದಿಶೆಯಲ್ಲಿ ನಾನು ಭರವಸೆ ಕೊಡುವುದೇನೆಂದರೆ, ಸ್ಟೇಷನ್ ಹೌಸ್ ಆಫೀಸರ್ಸ್ ಯಾರಿದ್ದಾರೆ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ಸ್ ಯಾರಿದ್ದಾರೆ, ಅವರುಗಳು ಈ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದ ಮುಖಾಂತರ ಹೇಳಿದ್ದೇನಲ್ಲದೆ ಮತ್ತೊಮ್ಮೆ ಅದನ್ನು ಪುನರುಚ್ಚಿಸಬಯಸುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರಗಳು ಮುಗಿಯಿತು.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ. ಬೈರೇಗೌಡ (ಕೃಷಿ ಹಾಗೂ ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 23.3.1999ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ 10ನೇ ಪಟ್ಟಿಯಲ್ಲಿರುವ 114 ಪ್ರಶ್ನೆಗಳ ಪೈಕಿ 96 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆ ಮುಂದೆ ಮಂಡಿಸುತ್ತಿದ್ದೇನೆ.

ಹುಬ್ಬಳ್ಳಿ ನಗರದಲ್ಲಿ ಹೊಸ ಪಡಿತರ ಚೀಟಿ ವಿತರಣೆ.

640 (705) ಶ್ರೀ ಅಶೋಕ ಶಂಕರ್ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಹೊಸ ಪಡಿತರ ಚೀಟಿ ಕೋರಿ ಇಲ್ಲಿಯವರಿಗೆ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; ಹಾಗೂ ಎಷ್ಟು ಪಡಿತರ ಚೀಟಿಗಳನ್ನುನೀಡಲಾಗಿದೆ ಹಾಗೂ ಬಾಕಿ ಇರುವ ಅರ್ಜಿದಾರರಿಗೆ ಯಾವಾಗ ನೀಡಲಾಗುವುದು;

ಆ) ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳನ್ನು ಯಾವಾಗ ಇತ್ಯರ್ಥ ಪಡಿಸಲಾಗುವುದು;

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;